MR. SPEAKER : How many people should have the courage? We have hardly courageous characters like you amongst us.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ಅವರು ಮಾತು ಕೇಳಿದರೆ ಇದು ಕಪ್ಪೆ ಹಾರುತ್ತದೆ ಎಂದು ಹೇಳಿ ಏಡಿ ಹಾರೋದಕ್ಕೆ ಹೋಗಿ ಎಂಟೂ ಕಾಲು ಮುರಿದು ಕೊಂಡಿತಂತೆ. ಆದೇನೊ ನೀವು ಒಂದು ತರಹ ನಡೆದಿದ್ದೀರಿ. ಅದು ನಡೆದುಹೋಗಿದೆ. ಬೇರೆಯವರಿಗೆ....

ಅಧ್ಯಕ್ಷರು : ಏನಿಲ್ಲ. He is a generous person. ದಯಮಾಡಿ ಸಮಯವಾದಾಗಲೆಲ್ಲಾ ಹೋಗಿ ಗೈಡೆನ್ಸ್ ತೆಗೆದುಕೊಳ್ಳಿ ಕಾಲು ಮುರಿದುಕೊಳ್ಳದಂತೆ ಮಾಡಿದರೆ ಕೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರ ಗೈಡೆನ್ಸ್‌ನಲ್ಲಿ ಮೂರು ದಿವಸವೂ ನಡೆಯುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ನಿಮಗೆ ಅಲ್ಲಿಗೆ ಹೋಗುವುದು ನಾಚಿಕೆ ಅನ್ನಿಸಿದರೆ ಶ್ರೀ ಕಾಗೋಡು ತಿಮ್ಮಪ್ಪನವರ ಹತ್ತಿರ ಕೇಳಿ. ಅವರೇ ಗೈಡ್ ಮಾಡುತ್ತಾರೆ. ತೊಂದರೆ ಇಲ್ಲ.

ಶ್ರೀ ಸಿ. ಬೈರೇಗೌಡ : ಈ Solemenisation ಪ್ರಾರಂಭವಾಗುವುದು ಎಲ್ಲಿಂದ?

MR. SPEAKER : Alright, let us start it from Kolar.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 1999

ಶ್ರೀ ಬಿ.ಎ. ಮೊಹಿದ್ದೀನ್ (ಉನ್ನತ ಶಿಕ್ಷಣ ಮಂತ್ರಿ) : ಮಾನ್ಯ ಅಧ್ಯಕ್ಷರೇ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಶ್ರೀ ಬಿ.ಎ. ಮೊಹಿದ್ದೀನ್ (ಉನ್ನತ ಶಿಕ್ಷಣ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಇದೊಂದು ಸರಳವಾದಂಥ ತಿದ್ದುಪಡಿ. ನಮ್ಮ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯ ಟೆಕ್ನಲಾಜಿಕಲ್ ಯೂನಿವರ್ಸಿಟಿ ಆದಮೇಲೆ ಆ ಫ್ಯಾಕಲ್ಟಿಗಳಿಗೆ ಬೇರೆ ನಮ್ಮ ಯೂನಿವರ್ಸಿಟಿಯಲ್ಲಿ ಯಾವುದೇ ಮೆಂಬರ್ ಶಿಫ್ ಇರಬಾರದು ಎನ್ನತಕ್ಕದ್ದು ಒಂದು. ಎರಡನೆಯದು ಎಂದರೆ, ಹಿಂದೆ ನಮ್ಮ ಡೈರೆಕ್ಟರ್ ಈ ಯೂನಿವರ್ಸಿಟಿ ಬಾಡೀಸ್‌ನಲ್ಲಿ ಅವರು ಮೆಂಬರ್ ಆಗಿರುತ್ತಿದ್ದರು. ಅದರ ಬದಲಾಗಿ ಈಗ ಕಮೀಷನರ್ ಫಾರ್ ಕೊಲೆಜಿಯೇಟ್ ಎಜ್ಯುಕೇಷನ್ ಅವರನ್ನು ಮೆಂಬರ್ ಮಾಡತಕ್ಕದ್ದು ಇದೆ. ಇನ್ನೊಂದು, ಹಿಂದೆ ಚೇರ್ಮನ್ ಆಫ್ ಪಿ.ಯು.ಸಿ. ಬೋರ್ಡ್ ಅವರು ಮೆಂಬರ್ ಆಗಿರುತ್ತಿದ್ದರು. ಅದರ ಬದಲಿಗೆ ಡೈರೆಕ್ಟರ್ ಆಫ್ ಪಿ.ಯು.ಸಿ. ಬೋರ್ಡನ್ನು ಮೆಂಬರ್ ಮಾಡತಕ್ಕದ್ದು. ಇದು ಸರಳ ತಿದ್ದುಪಡಿ ಇದೆ. ಇದಕ್ಕೆ ಎಲ್ಲರೂ ಅನುಮೋದನೆಯನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಆಗಬಹುದು. ಆದರೆ ಏನಾಗಿದೆ ಎಂದರೆ ಈ ಜನರಲ್ ಯೂನಿವರ್ಸಿಟಿಗಳಿಗೆ ಯಾವುದೇ ಪ್ರಾಮುಖ್ಯತೆ ಉಳಿಯಲಾರದ ಹಾಗೆ ಆಗುತ್ತಿದೆ. ಈಗ ಮೆಡಿಕಲ್ ಕಾಲೇಜು ತೆಗೆದುಕೊಂಡರೆ, ಎಲ್ಲಾ ಪ್ರೊಫೆಷನಲ್ ಕಾಲೇಜಸ್ ಒನ್‌ಬೈ ಒನ್ ವಿತ್‌ಡ್ರಾ ಆದಮೇಲೆ ಇದು ಬರೇ ಯೂನಿವರ್ಸಿಟಿ ಫಾರ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜು ಅಷ್ಟೇ ಆಗಿದೆ. ಇದರಿಂದ ಏನಾಗುತ್ತದೆ ಎಂದರೆ, ನಮ್ಮಲ್ಲಿ ಈ 12 ಜನರಲ್ ಯೂನಿವರ್ಸಿಟಿಗಳು ಇವೆ. ಈ ಹನ್ನೆರಡು ಯೂನಿವರ್ಸಿಟಿಗಳಿಗೆ ಮಹತ್ವ ಯಾವಾಗ ಇತ್ತು ಎಂದರೆ, ಇಂಜಿನಿಯರಿಂಗ್ ಕಾಲೇಜು ಇದ್ದಾಗ, ಮೆಡಿಕಲ್ ಕಾಲೇಜು ಇದ್ದಾಗ ಪ್ರೊಫೆಶನ್ ಕೋರ್ಸಸ್ ಅದಕ್ಕೆ ಅಫಿಲಿಯೇಟ್ ಆಗುತ್ತಿದ್ದಾಗ ಇತ್ತು.

MR. SPEAKER : Please welcome the Law Minister. He has entered the House.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ಅವರು ಬಂದಾಗ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದರೆ ಚೆನ್ನಾಗಿ ಇರುತ್ತಿತ್ತು. ಅದಕ್ಕೆ....

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಕಾನೂನು ಮಂತ್ರಿಯವರು ಬಂದಾಗ ನೆನಪು ಮಾಡಿ ಎಂದು ತಾವು ಹೇಳಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ಕ್ಲಾಸ್‌ಮೇಟ್‌ಗಳದ್ದು ಬಹಳ ಕಾಟವಾಗಿದೆ. ಅವರು ಇವರು ಕ್ಲಾಸ್‌ಮೇಟ್‌ಗಳಾಗಿದ್ದರಂತೆ ಅವರು ಏನಾದರೂ ಇಂಟರ್‌ಪ್ರಿಟ್ ಮಾಡಿದರೆ ಇವರು ಒಂದು ಇಂಟರ್‌ಪ್ರಿಟ್‌ಮಾಡುತ್ತಾರೆ. ಇವರು ಹೇಳಿದ್ದಕ್ಕೆ ಅವರು ಒಪ್ಪುವುದಿಲ್ಲ.

SRI M.C NANAIAH : I take it as my privilege that she was my class-mate.

MR. SPEAKER : It is not enough if you say so. She also has to say that. Is that so Madam. Alright, her silence is concurrence.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಒಪ್ಪಿಗೆ ಕೊಟ್ಟಮೇಲೆ ಇದಕ್ಕೆ ಮಹತ್ವವೇ ಕಳೆದುಕೊಳ್ಳುತ್ತದೆ. ಆದ್ದರಿಂದ ಇದು ಏನಾಗಿದೆ ಎಂದರೆ ಆ ವೈಸ್‌ಚಾನ್ಸಲರ್‌ಗೆ ಗೌರವ ಇಲ್ಲ. ಯೂನಿವರ್ಸಿಟಿಗೂ ಮಹತ್ವ ಇಲ್ಲ. ಅದಕ್ಕೆ ಸಿಗತಕ್ಕಂಥ ಗ್ರಾಂಟ್ಸ್ ಕೂಡ ವರ್ಷವರ್ಷೇ ಕಡಿಮೆಯಾಗುತ್ತದೆ. ಅವರೇನೂ ಕಾಡಿಬೇಡಿ ನಿಮ್ಮಲ್ಲಿಗೆ ಬಂದು ಅಡ್ಡಾಡುತ್ತಾರೆ. ಮಾರ್ಚ್ ಕೊನೆಗೆ ಏನಾದರೂ ಹತ್ತುಲಕ್ಷ-20 ಲಕ್ಷ-60 ಲಕ್ಷ ಕೊಡುತ್ತಾರೆ. ಅದು ಫೈನಾನ್ಸ್ ಡಿಪಾರ್ಟಮೆಂಟ್‌ನವರು ಒಪ್ಪಿದರೆ ಮಾತ್ರ. ಆದ್ದರಿಂದ ಇದನ್ನು ಸ್ವಲ್ಪ ಯೋಚನೆ ಮಾಡಿ. ಈಗ ನಾವೇನು ಮನಾಪಲೈಸ್ ಮಾಡುತ್ತಿದ್ದೇವೆ. ಇವತ್ತು ಹೆಲ್ತ್ ಯೂನಿವರ್ಸಿಟಿ ಎಂದು ಮಾಡಿ, ಎಲ್ಲಾ ಮೆಡಿಕಲ್ ಕಾಲೇಜುಗಳು ಇಲ್ಲಿ ಬರುತ್ತವೆ. ವಿಶ್ವೇಶ್ವರಯ್ಯ ಇಂಜನಿಯರಿಂಗ್ ಇನ್ಸಿಟಿಟ್ಯೂಟ್ ಎಂದು ಮಾಡಿದ್ದೇವೆ. ಅವುಗಳೂ ಕೂಡ ಏನಾಗಿವೆ ಎಂದರೆ

ಅವೇ ಮನಾಪಲೈಸ್ ಆಗಿದೆ. ಈಗ ಎಲ್ಲರ ಗಮನ ಇಂಜಿನಿಯರಿಂಗ್ ಕಾಲೇಜ್, ಮೆಡಿಕಲ್ ಕಾಲೇಜ್ ಕಡೆಗೆ ಇದೆ. ಜನರಲ್ ಯೂನಿವರ್ಸಿಟಿಗಳನ್ನು ಕೇಳುವವರೇ ದಿಕ್ಕಿಲ್ಲ. ಅದಕ್ಕೆ ಹಣವೂ ಇಲ್ಲ, ಏನೂ ಇಲ್ಲ...

ಶ್ರೀ ಜೆ.ಹೆಚ್. ಪಟೇಲ್ : ಇದನ್ನು ಪುನರ್ ಪರಿಶೀಲನೆ ಮಾಡೋಣ.

ಅಧ್ಯಕ್ಷರು : ಸರ್ಕಾರ ಇದನ್ನು ಪುನರ್ ಪರಿಶೀಲನೆ ಮಾಡತಕ್ಕಂಥ ಮಾತನ್ನು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದನ್ನು ಮರುವಿಚಾರ ಮಾಡಿ ಎಂದೇ ನಾವು ಕೇಳುತ್ತಿರುವುದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಯೂನಿವರ್ಸಿಟಿ ಫಾರ್ ವಿಮನ್ ಎಂದು ಮಾಡಬೇಕಾಗುತ್ತದೆ. ಇದು ಮಹಾರಾಷ್ಟ್ರ ಮತ್ತು ಡೆಲ್ಲಿಯಲ್ಲಿದೆ. ಇಲ್ಲೂ ಕೂಡ ಏಕೆ ಬರಬಾರದು?

7.50 ಪಿ.ಎಂ

ಶ್ರೀ ಮಾಟಾಳ್ ನಾಗರಾಜ್ : ಈಗ ಮಹಿಳೆಯರ ವಿಶ್ವವಿದ್ಯಾನಿಲಯ ಮಾಡಿ ಏನು ಮಾಡಬೇಕು ಅಂತ ಸ್ವಲ್ಪ ಹೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಏನು ಮಾಡಬಾರದು?

(ಗೊಂದಲ)

ಅಧ್ಯಕ್ಷರು : ಮಾನ್ಯ ಮೊಹಿದ್ದೀನ್‌ರವರೇ, ಇದನ್ನು ಸನ್ಮಾನ್ಯ ಸಭಾನಾಯಕರು ಸೋಮವಾರ ತೆಗೆದುಕೊಳ್ಳೋಣ ಎಂದು ಹೇಳಿದ್ದಾರೆ. ಆದ್ದರಿಂದ ಮುಂದಿನದ್ದಕ್ಕೆ ಹೋಗೋಣ.

ಕನ್ನಡ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ, 1999 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎ. ಮೊಹಿದ್ದೀನ್ (ಉನ್ನತ ಶಿಕ್ಷಣ ಮಂತ್ರಿ) : ಮಾನ್ಯ ಅಧ್ಯಕ್ಷರೇ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಕನ್ನಡ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವ ಮಂಡಿಸಲ್ಪಟ್ಟಿತ್ತು

ಶ್ರೀ ಬಿ.ಎ. ಮೊಹಿದ್ದೀನ್ (ಉನ್ನತ ಶಿಕ್ಷಣ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಕನ್ನಡ ಯೂನಿವರ್ಸಿಟಿ ಆಕ್ಟ್‌ನಲ್ಲಿ ಕರ್ನಾಟಕದ ಮುಖ್ಯಮಂತ್ರಿಯವರು ಎಂಬ ಪದಗಳಿಗೆ ಬದಲಾಗಿ 'ಕರ್ನಾಟಕದ ರಾಜ್ಯಪಾಲರು' ಎಂದು ಬದಲಾವಣೆ ಮಾಡಲಾಗಿದೆ. ಇದನ್ನು ಯು.ಜಿ.ಸಿ. ನಿಯಮಾವಳಿಗಳ ಅಡಿಯಲ್ಲಿ ತರುವುದರಿಂದ ನಮಗೆ ಯು.ಜಿ.ಸಿ. ಯಿಂದ ಅನುದಾನ ಸಿಗಬಹುದು ಎನ್ನತಕ್ಕಂಥ ಉದ್ದೇಶದಿಂದ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ-